ದಿನಾಂಕ: 19.02.2018

ಸಲ್ಲಿಸಿದೆ.

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2015ರ ಸೆಕ್ಷನ್ 4 (1)(ಎ) ಮತ್ತು 4 (1)(ಬಿ) ರನ್ವಯ ಮಾಹಿತಿಯನ್ನು ತಯಾರಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಿಸುವ ಸಲುವಾಗಿ ವಿಭಾಗಗಳ ಮುಖ್ಯಸ್ಥರಿಂದ ಮಾಹಿತಿ ಪಡೆಯುವ ಬಗ್ಗೆ.

ಉಲ್ಲೇಖ : ನೆಯುಸಂ/ಆಡಳಿತ/66/2017-18 ದಿನಾಂಕ: 09.02.2018.

***********

## ಕನ್ನಡ ಭಾಷೆ

**ವಿಭಾಗದ ಸಂಕ್ಷಿಪ್ತ ವಿವರ :**

- ವೈದ್ಯಕೀಯ ಸಮಾಜ ಕಾರ್ಯ ವಿಭಾಗವು ಸಂಸ್ಥೆಯ ವಿವಿಧ ವಿಭಾಗ ಹಾಗೂ ರೋಗಿ/ಸಂಬಂಧಿಗಳ ನಡುವೆ ಸಂಪರ್ಕ ಸೇತುವೆಯಂತೆ ಕಾರ್ಯ ನಿರ್ವಹಿಸುತ್ತಿದೆ.
- ಸಂಸ್ಥೆಗೆ ಭೇಟಿ ನೀಡುವ ರೋಗಿಗಳ ಆರ್ಥಿಕ-ಸಾಮಾಜಿಕ ಸ್ಥಿತಿಯ ಅನುಸಾರ ಸಂಸ್ಥೆಯಲ್ಲಿ ಲಭ್ಯವಿರುವ ವಿವಿಧ ಆರೋಗ್ಯ ಯೋಜನೆಗಳ ಬಗ್ಗೆ ರೋಗಿಗಳಿಗೆ ಆಪ್ತ ಸಮಾಲೋಚನೆ ನೀಡುವುದು.
- ವೈಯಕ್ತಿಕ ಹಾಗೂ ಕೌಟುಂಬಿಕ ಆಪ್ತ ಸಮಾಲೋಚನೆ, ದೀರ್ಘಕಾಲ ಆಸ್ಪತ್ರೆಯಲ್ಲಿ ದಾಖಲಾಗಿರುವ ರೋಗಿಗಳಿಗೆ ಬೆಂಬಲಸಹಿತ (SUPPORTIVE COUNSELLING ) ಆಪ್ತ ಸಮಾಲೋಚನೆ ನೀಡುವುದು.
- ಕಿಡ್ನಿ ಕಸಿ ಚಿಕಿತ್ಸೆ ಮಾಡಿಸಿಕೊಳ್ಳಲು ಬಯಸುವ ಸ್ವೀಕೃತಿ ಮತ್ತು ದಾನಿಗಳಿಗೆ ವಿವಿಧ ಹಂತಗಳಲ್ಲಿ ಅಗತ್ಯ ಆಪ್ತಸಮಾಲೋಚನೆ ನೀಡುವುದು, ಮತ್ತು ಇತರೆ...

## English Language

**Brief Information about Department :**

- Medical Social Work Department acts as a bridge between the Patients / Attendants / Relatives and the different Department in Institute.
- To assess the Socio– Economic states of the patient and to counsel him / her regarding the different schemes.
- To counsel on long term hospitalization ( Supportive therapy and Individual/ Family counselling)
- To counsel prospective renal transplantation recipient and donor, and ext…

Institute of Nephro-Urology
Victoria Hospital Campus, Bangalore
Registration No. 8104 D: 19/2/18
Off. Supdt. A.O. Director

…2

ಸಂಸ್ಥೆಯಲ್ಲಿ ಲಭ್ಯವಿರುವ ಯೋಜನಾ ಸೌಲಭ್ಯಗಳ ಮಾಹಿತಿಯನ್ನು ಸಂಸ್ಥೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಈಗಾಗಲೇ ನೀಡಲಾಗಿದೆ. ನವೀಕೃತ ಮಾಹಿತಿಯು ಈ ಕೆಳಕಂಡಂತಿದೆ:

- **ಪೆರಿಟೋನಿಯಲ್ ಡಯಾಲಿಸಿಸ್ ಯೋಜನೆ (CAPD Scheme) :**

**ಕನ್ನಡ ಭಾಷೆ**

ಈ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಉಚಿತ ಚಿಕಿತ್ಸೆ ಪಡಿಯುವ ರೋಗಿಗಳು ಈ ಸಂಸ್ಥೆಯಲ್ಲಿ ನೋಂದಣಿ ಮಾಡಿಸಿಕೊಂಡು ಚಿಕಿತ್ಸೆ ಪಡೆಯುತ್ತಿರಬೇಕು ಹಾಗೂ ಕರ್ನಾಟಕ ರಾಜ್ಯದ ಬಿಪಿಎಲ್ (ಆದ್ಯತಾ ಕುಟುಂಬ) ಪಡಿತರ ಚೀಟಿ ಅಥವಾ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ರೂ.20,000/-ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಪ್ರಮಾಣ ಪತ್ರವನ್ನು ಹೊಂದಿರುವತಕ್ಕದ್ದು.

**English Language**

Patients with Karnataka State BPL card (Priority Household) or annual income certificate Rs. 20,000/- and below, issued by the concerned taluk Tahasildhar are eligible for free treatment under CAPD scheme.

**ಕನ್ನಡ ಭಾಷೆ**

ಪೆರಿಟೋನಿಯಲ್ ಡಯಾಲಿಸಿಸ್ ವಿಧಾನದಲ್ಲಿ ಒಂದು ಚಿಕ್ಕ ಹಾಗೂ ಮೃದುವಾದ ಕೊಳವೆಯ ಮೂಲಕ ಡಯಾಲಿಸಿಸ್ ದ್ರಾವಣವನ್ನು ಹೊಟ್ಟೆಯಲ್ಲಿ ಹರಿಸಲಾಗುತ್ತದೆ. ಈ ದ್ರಾವಣವು ಹೊಟ್ಟೆಯಲ್ಲಿ ನಿಗಧಿತ ಕಾಲ ಇದ್ದು ರಕ್ತದಲ್ಲಿರುವ ಕಲ್ಮಶ ಹಾಗೂ ನೀರನ್ನು ಹೀರಿಕೊಳ್ಳುತ್ತದೆ. ಆ ನಂತರ ಈ ದ್ರಾವಣವನ್ನು ಹೊಟ್ಟೆಯಿಂದ ಹೊರತೆಗೆಯಲಾಗುತ್ತದೆ ಹಾಗೂ ಪುನಃ ಹೊಸದಾಗಿ ದ್ರಾವಣ ಸೇರಿಸಿ ಈ ಪ್ರಕ್ರಿಯೆಯನ್ನು ಮೊದಲಿನಂತೆ ಮುಂದುವರಿಸಲಾಗುತ್ತದೆ. ಹೊಟ್ಟೆಯಲ್ಲಿರುವ ಪೆರಿಟೋನಿಯಂ ಎಂಬ ತೆಳು ಪದರವು ಈ ಕಾರ್ಯದಲ್ಲಿ ಸಹಾಯ ಮಾಡುವ ಕಾರಣ ಇದಕ್ಕೆ ಪೆರಿಟೋನಿಯಲ್ ಡಯಾಲಿಸಿಸ್ ಎಂದು ಕರೆಯಲಾಗುತ್ತದೆ.

**English Language**

Continuous Ambulatory Peritoneal Dialysis (CAPD), in which a liquid called dialysate is put into your abdomen through a catheter (thin tube). Patients manually exchange PD fluids using a solution bag and tubing connected to the catheter specific times a day. The therapy works by cleaning the blood of toxins and removing extra fluids through one of the body's own membranes, the peritoneal membrane.

19/02/18

ವೈದ್ಯಕೀಯ ಸಾಮಾಜಿಕ ಕಾರ್ಯಕರ್ತರು
ನೆ.ಯು.ಸಂ.ಬೆಂಗಳೂರು.